

# ಕೂಂಬಾಯಣ!



ಫ್ಯಾಷನ್‌ಪ್ರಿಯರೇ ಇರಲಿ, ದ್ವೇಷಿಗಳೇ ಇರಲಿ, ಬಾಚಣಿಗೆ ಮಾತ್ರ ಸರ್ವರಿಗೆ ಅವಶ್ಯಕ, ಅಗತ್ಯ ಎಂದೇ ಹೇಳಬಹುದು. ಸರ್ವಶೃಂಗಾರ ಪ್ರಸಾಧನಗಳಲ್ಲಿ ಹಣಿಗೆಗೇ ಅಗ್ರಸ್ಥಾನ ಎಂದರೂ ಉತ್ಪ್ರೇಕ್ಷೆಯಲ್ಲ.

■ ನಳಿನಿ ಟಿ. ಭೀಮಪ್ಪ

ಮೊನ್ನೆ ಪ್ರವಾಸಕ್ಕೆಂದು ಹೋಗಲು ತಯಾರಾಗುವಾಗ ಎಲ್ಲರ ಲಗೇಜು ಪ್ಯಾಕ್ ಆಗಿ, ತೊಳೆದಿಟ್ಟ ಬಾಚಣಿಗೆಗಳನ್ನು ಇಟ್ಟುಕೊಳ್ಳುವುದನ್ನೇ ಮರೆತುಹೋಗಿದ್ದೆ. ರಾತ್ರಿ ಸೀದಾ ಹೋಟೆಲ್‌ಗೆ ಹೋಗಿ ಪಟ್ಟಾಗಿ ಉಂಡು, ರಾತ್ರಿ ಮಲಗಿ ಬೆಳ್ಬಳಗ್ಗೆ ಎದ್ದು ಕರಡಿ ತಲೆಯಂತಾಗಿದ್ದ ಕೂದಲನ್ನು ಬಾಚೋಣ ಎಂದು ಹೊರಟಾಗಲೇ ಅದರ ಅರಿವಾಗಿದ್ದು.

ಯಜಮಾನರು ಸಿಡಿಮಿಡಿಗೊಂಡು, ಇನ್ಮೇಲೆ ನನ್ನ ಸಾಮಾನಿನ ತಂಟೆಗೆ ಬರಬೇಡಾ ಎಂದು ಗದರಿದ್ದರು. ಮಿರಿಮಿರಿ ಮಿನುಗುವ ಬಾಂಡ್ಲಿ ತಲೆಯ ಮೇಲೆ ಹೌದೋ, ಅಲ್ಲವೋ ಅನ್ನೋ ಹಾಗಿರುವ ನಾಲ್ಕು ಕೂದಲನ್ನು ಬಾಚಿಕೊಂಡರೆಷ್ಟು, ಬಿಟ್ಟರೆಷ್ಟು ಎನ್ನುವವರೇ ಹೀಗೆ ಪೇಚಾಡುವಾಗ, ನಾನೆಷ್ಟು ಪೇಚಾಡಬೇಕು ಹೇಳಿ? ಅಷ್ಟು ಹೊತ್ತಿಗೆ ನಮ್ಮ ಎರಡು ಚಿಳ್ಳೆಮರಿಗಳೂ ಎದ್ದು ಕೂತಿದ್ದವು. ಮುಳ್ಳುಹಂದಿಯ ಸ್ಪೈಕ್‌ನ ಹಾಗೆ ನಿಗುರಿ ನಿಂತಿದ್ದ ಅವರ ಕೂದಲನ್ನು ನೋಡಿ, ರಿಸೆಪ್ಷನ್ ಬಳಿ ಹೋಗಿ ಸ್ವಲ್ಪ ವಿಚಾರಿಸಿ, ಬಾಚಣಿಗೆಗೆ ಏನಾದರೂ ವ್ಯವಸ್ಥೆಯಾಗಬಹುದು ಎಂದು ಯಜಮಾನರನ್ನು ಓಡಿಸಿದ್ದೆ.

ಗೊಣಗುತ್ತಲೇ ತಲೆಸವರಿಕೊಳ್ಳುತ್ತ ಹೋದರು. ಅವರು ಬರುವ ತನಕ ಮೂರೂ ಜನ ಹೊಟ್ಟೆ ಹಸಿದುಕೊಂಡು, ಕಾಂಪ್ಲಿಮೆಂಟರಿ ಟಿಫಿನ್ ಕಾಲ್ ಬಂದರೂ ಹೋಗದಂತೆ, ಕರೆಂಟ್ ಹೊಡೆದ ಕಾಗೆಗಳ ಹಾಗೆ ಕೂದಲು ಕೆದರಿಕೊಂಡು ಹೋಟೆಲ್ ರೂಮಿನಲ್ಲೇ ಬಂಧಿಯಾಗಿದ್ದೆವು. ರೂಮ್‌ಬಾಯ್ ಯಾವುದೋ ಒಂದು ಮೊಸಳೆ ಹಲ್ಲಿನ ಬಾಚಣಿಗೆ ತಂದುಕೊಡುತ್ತಿದ್ದಂತೆ, ಆಪತ್ತಿಗಾದವನೇ ನೆಂಟ ಎಂದು ಅದನ್ನು ಕಣ್ಣಿಗೊತ್ತಿಕೊಂಡು, ತಲೆಗೂದಲು ಸರಿಪಡಿಸಿಕೊಂಡು ಹೊರಬಿದ್ದಿದ್ದಾಯ್ತು.

ಯಾವುದೇ ಜಾತಿ, ಧರ್ಮ, ಲಿಂಗಭೇದವಿಲ್ಲದೆ ಆಲಂಕಾರಿಕ ಪ್ರಸಾಧನಗಳಲ್ಲಿ ಮೊದಲ ಪ್ರಾಶಸ್ತ್ಯ ಬಾಚಣಿಗೆಗೇ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಫ್ಯಾಷನ್‌ಪ್ರಿಯರೇ ಇರಲಿ, ದ್ವೇಷಿಗಳೇ ಇರಲಿ, ಬಾಚಣಿಗೆ ಮಾತ್ರ ಸರ್ವರ ಅವಶ್ಯಕ, ಅನಿವಾರ್ಯತೆ, ಅಗತ್ಯ ಎಂದೇ ಹೇಳಬಹುದು. ಮುಂಜಾನೆ ಎದ್ದ ಕೂಡಲೇ, ಕನ್ನಡಿಯ ಮುಂದೆ ನಿಂತು ಮೊದಲು ದೃಷ್ಟಿ ಹರಿಸುವುದೇ ಕೆದರಿದ ತಲೆಯ ಕಡೆಗೆ. ನೂರಾರು ಅಲಂಕಾರ ಸಾಮಗ್ರಿಗಳು ಪವಡಿಸಿದ್ದರೂ ಅದರ ಗೊಡವೆಗೆ ಹೋಗದೆ ಮೊದಲು ಕೈಹಾಕುವುದೇ ಬಾಚಣಿಗೆಗೆ. ತಲೆಗೂದಲು ಒಪ್ಪವಾಗಿದ್ದರೆ ಮತ್ಯಾವ ಅಲಂಕಾರ ಇರದಿದ್ದರೂ ನಡೆಯುತ್ತದೆ. ಅದೇ ಕೂದಲು ಅಸ್ತವ್ಯಸ್ತವಿದ್ದರೆ ಮಾಡಿದ ಅಲಂಕಾರವೆಲ್ಲ ದಂಡ ಎನ್ನಬಹುದು. ಇದೇ ಕಾರಣಕ್ಕೆ ಅಡಿಯಿಂದ ಮುಡಿಯವರೆಗೆ ಎನ್ನುವ ಮಾತು ಚಾಲ್ತಿಗೆ ಬಂದಿರಲಿಕ್ಕೂ ಇರಬಹುದು.

ಹಾಗಾಗಿ ಬಹುತೇಕ ಹೆಣ್ಣುಮಕ್ಕಳ ವ್ಯಾನಿಟಿ ಬ್ಯಾಗಿನಲಿ, ಗಂಡುಮಕ್ಕಳ ಪ್ಯಾಂಟ್ ಜೇಬಿನಲಿ ಪುಟ್ಟ ಪುಟ್ಟ ಬಾಚಣಿಗೆಗಳು ಬೆಕ್ಕಿನ ಮರಿಯಂತೆ ಬೆಚ್ಚಗೆ ಅಡಗಿ ಕುಳಿತಿರುತ್ತವೆ. ಸಿನಿಮಾವೊಂದರಲ್ಲಿನ ‘ತಲೆಬಾಚ್ಕೊಳೋ, ಪೌಡ್ರು ಹಾಕ್ಕೊಳೋ’ ಎನ್ನುವ ಹಾಡಿನಲ್ಲಿ, ಮತ್ತೊಂದು ಸಿನಿಮಾದಲ್ಲಿ ಮದುವೆಯೊಂದನ್ನು ತಪ್ಪಿಸಲು, ನಾಯಕ ತನ್ನ ಸ್ನೇಹಿತರ ಜೊತೆ ಸೇರಿ ಮದುವೆ ಮನೆಯಲ್ಲಿರುವ ಹೆಂಗಸರ ಬಾಚಣಿಗೆಗಳನ್ನೆಲ್ಲ ರಾತ್ರಿಯ ಹೊತ್ತು